**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2018–19** **ದಿನಾಂಕ: 16–01–2019**

# ಪತ್ರಿಕಾ ಆಮಂತ್ರಣ

1. ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ಲೋಕಾರ್ಪಣೆ ಕಾರ್ಯಕ್ರಮ:

**ಲೋಕಾರ್ಪಣೆ:**

ಹೆಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗಳು

**ನಿಗಮದ ಯೋಜನೆಗಳ ಮಾಹಿತಿ ಕೈಪಿಡಿ ಬಿಡುಗಡೆ:**

ಡಾ ಜಿ. ಪರಮೇಶ್ವರ್, ಉಪ ಮುಖ್ಯಮಂತ್ರಿಗಳು

**ಪ್ರಗತಿ ಕಾಲೋನಿ ಯೋಜನೆಗೆ ಚಾಲನೆ:**

ಸಿದ್ದರಾಮಯ್ಯ,
ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾಲಿ ಶಾಸಕರು, ಬಾದಾಮಿ ವಿಧಾನಸಭಾ ಕ್ಷೇತ್ರ.

**ಸಮಾಜ ಕಲ್ಯಾಣ ಇಲಾಖೆ ರೂಪಿಸಿರುವ ಹೊಸ ಯೋಜನೆಗಳ ಮಾಹಿತಿ ಕೈಪಿಡಿ ಬಿಡುಗಡೆ**

ಮಾಜಿ ಕೇಂದ್ರ ಸಚಿವರಾದ:

ಎಂ. ಮಲ್ಲಿಕಾರ್ಜುನ್ ಖರ್ಗೆ ಹಾಗೂ

ಕೆ.ಎಚ್. ಮುನಿಯಪ್ಪ

**ಘನ ಉಪಸ್ಥಿತಿ:**

ಪ್ರಿಯಾಂಕ್ ಖರ್ಗೆ, ಸಮಾಜ ಕಲ್ಯಾಣ ಸಚಿವರು

**ಅಧ್ಯಕ್ಷತೆ:**

ಡಾ ಸಿ.ಎನ್. ಅಶ್ವಥ್‌ನಾರಾಯಣ್, ಶಾಸಕರು, ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ.

ದಿನಾಂಕ: 17–01–2019, ಗುರುವಾರ ಸಮಯ: ಬೆಳಿಗ್ಗೆ : 11–30 ಗಂಟೆಗೆ.

ಸ್ಥಳ: ಗಾಯಿತ್ರಿ ಗ್ರ್ಯಾಂಡ್, ಗಾಯಿತ್ರಿ ವಿಹಾರ ಆವರಣ, ಗೇಟ್ ನಂ. 4, ಅರಮನೆ ಮೈದಾನ, ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು.

2 PRESS CONFERENCE:
To discuss
In depth details of the Organics and Millets International Trade Fair – 2019.

Shri N.H. Shivashankara Reddy,
Minister for Agriculture, GOK.

Shri Mahashwara Rao,
Principal Secretary,
Department of Agriculture, GOK.

Dr. K. G. Jagadeesha,
Commissioner,
Department of Agriculture. GOK

Date: 17-01-2019 Thrusday, Time: 12.00 Noon.

Venue: Tripuravasini, (Palace Grounds) Bengaluru.

Note: Media Vechicle Passes for Organics and Millets International Trade Fair – 2019 held from January 18 to 20 are given by the Department of Information and Public Relations.
2 Passes for one media organisation.
Please Contact : Mrs. Latha, AAO, Press and News Section,
Mobile No. 9886527600

# <u>ಪತ್ರಿಕಾ ಪ್ರಕಟಣೆ</u>

## <u>ಕೊಡಗು ಜಿಲ್ಲೆ – ಭೂಕುಸಿತದಿಂದ ಹಾನಿಗೊಳಗಾದ</u>
## <u>840 ಕುಟುಂಬಗಳಿಗೆ ವಸತಿ ಸೌಲಭ್ಯ</u>

ಬೆಂಗಳೂರು, ಜನವರಿ 16 (ಕರ್ನಾಟಕ ವಾರ್ತೆ)

ಕೊಡಗು ಜಿಲ್ಲೆಯಲ್ಲಿ ನೆರೆಹಾವಳಿ ಹಾಗೂ ಭೂಕುಸಿತದಿಂದ ಹಾನಿಗೊಳಗಾದ 840 ಕುಟುಂಬಗಳಿಗೆ ಪುನರ್ ವಸತಿ ಕಲ್ಪಿಸಲು ಎರಡು ಬೆಡ್ ರೂಮ್ ಮನೆಗಳನ್ನು ಪ್ರತಿ ಮನೆಗೆ ಅಂದಾಜು ರೂ 9.85 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲು ಹಾಗೂ ಒಟ್ಟಾರೆ ಯೋಜನೆಗೆ ರೂ 8274 ಲಕ್ಷ ಮೊತ್ತದಲ್ಲಿ ನಿರ್ವಹಿಸಲು ಸರ್ಕಾರದಿಂದ ದಿನಾಂಕ: 27–11–2018 ರಂದು ಅನುಮೋದನೆ ನೀಡಲಾಗಿದೆ.

ಈ ಮನೆಗಳ ನಿರ್ಮಾಣ ಕಾಮಗಾರಿಯನ್ನು ನಿರ್ಮಾಣ ಸಂಸ್ಥೆಯಾದ ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಕೇಂದ್ರಕ್ಕೆ ವಹಿಸಲಾಗಿದೆ. ಇದಲ್ಲದೇ ಬಡಾವಣೆಗಳಿಗೆ ಮೂಲಭೂತ ಸೌಕರ್ಯ ಕಾಮಗಾರಿಗಳಿಗೆ ಒಟ್ಟು ರೂ 31.63 ಕೋಟಿಗಳನ್ನು ಮುಖ್ಯಮಂತ್ರಿಗಳವರ ಪರಿಹಾರ ನಿಧಿಯಿಂದ ಭರಿಸಲು ಸರ್ಕಾರವು ದಿನಾಂಕ: 05–12–2018 ರಂದು ಅನುಮೋದನೆ ನೀಡಿರುತ್ತದೆ.

ಮನೆ ನಿರ್ಮಾಣದ ಅಂದಾಜು ವೆಚ್ಚದಲ್ಲಿ ಸಹಾಯಧನದ ಮೊತ್ತ (ವಿವಿಧ ವಸತಿ ಯೋಜನೆಗಳಡಿ ನೀಡಲಾಗುವ ಸಹಾಯಧನ) ರೂ 1111 ಲಕ್ಷ ರೂ. ಗಳನ್ನು ಹಾಗೂ ಬಾಕಿ ರೂ 7163 ಲಕ್ಷಗಳನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಭರಿಸಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಸಂಸ್ಥೆಗೆ ಬಿಡುಗಡೆ ಮಾಡಲು ಆದೇಶಿಸಲಾಗಿದೆ.

ಮುಖ್ಯಮಂತ್ರಿಗಳು ದಿನಾಂಕ: 07–12–2018 ರಂದು ಮನೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆಯನ್ನು ನೆರವೇರಿಸಿರುತ್ತಾರೆ.

ನಿರ್ಮಾಣ ಸಂಸ್ಥೆಯಾದ ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಕೇಂದ್ರದಿಂದ ಮನೆಗಳ ನಿರ್ಮಾಣ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಇನ್ನುಳಿದ ಪ್ರದೇಶಗಳಲ್ಲಿ ಕೂಡಲೇ ಮನೆ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಸಂತ್ರಸ್ಥರಿಗೆ ಆದಷ್ಟು ಬೇಗ ಮನೆ ನಿರ್ಮಾಣ ಮಾಡಿ ಹಸ್ತಾಂತರಿಸಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮನೆ ನಿರ್ಮಾಣ ಕಾಮಗಾರಿಗಳ ಪ್ರದೇಶ/ಬಡಾವಣೆ ಮತ್ತು ಛಾಯಾಚಿತ್ರಗಳು, ನಿಗಮದ ವೆಬ್‌ಸೈಟ್ https://ashraya.karnataka.gov.in ನಲ್ಲಿ ಲಭ್ಯವಿದ್ದು, ವೀಕ್ಷಿಸಬಹುದಾಗಿದೆ ಎಂದು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಅಧಿಕೃತ ಪ್ರಕಟಣೆ ತಿಳಿಸಿದೆ.

# ಗಣರಾಜ್ಯೋತ್ಸವ : ಮಕ್ಕಳಿಗೆ ವಿವಿಧ ಸ್ಪರ್ಧೆ

ಬೆಂಗಳೂರು, ಜನವರಿ 16 (ಕರ್ನಾಟಕ ವಾರ್ತೆ)

ಬಾಲಭವನವು ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಜನವರಿ 26 ರಂದು 5 ರಿಂದ 16 ವರ್ಷದ ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಕೇಂದ್ರ ಬಾಲಭವನ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.

ದೇಶಭಕ್ತಿ ಗೀತೆ : 5 ರಿಂದ 16 ವರ್ಷದ ಮಕ್ಕಳಿಗೆ ಬೆಳಿಗ್ಗೆ 9–30 ಗಂಟೆಯಿಂದ (ಪ್ರತಿ ಸ್ಪರ್ಧೆಗೆ 3 ನಿಮಿಷಗಳ ಅವಧಿ)

ಸ್ಥಳದಲ್ಲೇ ಚಿತ್ರ ಬಿಡಿಸುವ ಚಿತ್ರಕಲಾ ಸ್ಪರ್ಧೆ : 5 ರಿಂದ 16 ವರ್ಷದ ಮಕ್ಕಳಿಗೆ ಬೆಳಿಗ್ಗೆ 10–30 ಗಂಟೆಯಿಂದ (ಹಾಳೆಗಳನ್ನು ಮಾತ್ರ ನೀಡಲಾಗುವುದು ಉಳಿದ ಸಾಮಗ್ರಿಗಳನ್ನು ಮಕ್ಕಳೇ ತರಬೇಕು).

ವೇಷ ಭೂಷಣ ಸ್ಪರ್ಧೆ 5 ರಿಂದ 8 ವರ್ಷದ ಮಕ್ಕಳಿಗೆ (ವಿಷಯ: ರಾಷ್ಟ್ರೀಯ ನಾಯಕರು ಅಥವಾ ಸ್ವಾತಂತ್ರ್ಯ ಹೋರಾಟಗಾರರು ಅವಶ್ಯ ವೇಷಭೂಷಣ ಧರಿಸಿ ಬರುವುದು.)

ಅಂದು ಸಂಜೆ 3–00 ಗಂಟೆಗೆ ವಾರ್ಷಿಕ ಶಿಬಿರದ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದ್ದು, ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಪ್ರಮಾಣ ಪತ್ರ ವಿತರಣೆ ಹಾಗೂ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಸ್ಪರ್ಧೆಗಳಲ್ಲಿ ಭಾಗವಹಿಸುವ ಆಸಕ್ತ ಮಕ್ಕಳು ದಿನಾಂಕ: 24-01-2019 ರ ಒಳಗೆ ವಿವರಗಳನ್ನು ಕಚೇರಿ ವೇಳೆಯಲ್ಲಿ ನೋಂದಾಯಿಸಬಹುದಾಗಿದೆ. (ರಜಾ ದಿನಗಳನ್ನು ಹೊರತುಪಡಿಸಿ)

ಹೆಚ್ಚಿನ ವಿವರಗಳಿಗೆ ಹಾಗೂ ನೋಂದಣಿಗಾಗಿ ಕಾರ್ಯದರ್ಶಿಗಳ ಕಚೇರಿ, ಬಾಲ ಭವನ ಸೊಸೈಟಿ, ಕಬ್ಬನ್ ಪಾರ್ಕ್ ಬೆಂಗಳೂರು ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080–22864189 ರ ಮೂಲಕ ಸಂಪರ್ಕಿಸಬಹುದಾಗಿದೆ ಅಥವಾ ಇಮೇಲ್ secbalbhavan.bng@gmail.com ಮೂಲಕ ವೀಕ್ಷಿಸಿ ಮಾಹಿತಿ ಪಡೆಯಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಅಂತಿಮ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಜನವರಿ 16 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ವಿವಿಧ ವಿಷಯಗಳ ಶಿಕ್ಷಕರ ಹುದ್ದೆಗಳು ಹಾಗೂ ಇನ್ನಿತರ ಇಲಾಖೆಗಳ ವಿವಿಧ ಹುದ್ದೆಗಳ ಅಂತಿಮ ಆಯ್ಕೆಪಟ್ಟಿಯನ್ನು ಜನವರಿ 8 ಮತ್ತು 9 ರಂದು ಆಯೋಗದ ವೆಬ್‌ಸೈಟ್ www.kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಗದಗ ಜಿಲ್ಲೆಗೆ ರಾಷ್ಟ್ರೀಯ ಪ್ರಶಸ್ತಿ

ಬೆಂಗಳೂರು, ಜನವರಿ 16 (ಕರ್ನಾಟಕ ವಾರ್ತೆ)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ "ಬೇಟಿ ಬಚಾವೋ – ಬೇಟಿ ಪಡಾವೋ" ಯೋಜನೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ ದೇಶದ 25 ಜಿಲ್ಲೆಗಳಲ್ಲಿ ಗದ ಸಹ ಆಯ್ಕೆಯಾಗಿ ರಾಷ್ಟ್ರ ಪ್ರಶಸ್ತಿ ಪಡೆದುಕೊಂಡಿದೆ.

ಈ ಸಾಧನೆ ಸಕಾರಗೊಳ್ಳುವುದರಲ್ಲಿ ಶ್ರಮಿಸಿದ ಸರ್ವರಿಗೂ, ಜಿಲ್ಲಾಡಳಿತಕ್ಕೂ ತಮ್ಮ ಇಲಾಖೆ ಅಧಿಕಾರಿ, ಸಿಬ್ಬಂದಿ ವರ್ಗದವರಿಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವೆ ಡಾ ಜಯಮಾಲ ರಾಮಚಂದ್ರ ಅವರು ಕೃತಜ್ಞತೆ ಸಲ್ಲಿಸಿದ್ದಾರೆ. ಅಲ್ಲದೆ ಈ ರಾಷ್ಟ್ರೀಯ ಪುರಸ್ಕಾರ ಇನ್ನಷ್ಟು ಉತ್ಸಾಹದಿಂದ ಕೆಲಸಮಾಡಲು ಪ್ರೇರಣೆ ಎಂದಿದ್ದಾರೆ.

ಜನವರಿ 24 ರಂದು ನವದೆಹಲಿಯಲ್ಲಿ ಹಮ್ಮಿಕೊಂಡಿರುವ ರಾಷ್ಟ್ರೀಯ ಹೆಣ್ಣು ಮಗು ದಿನಾಚರಣೆ ಹಮ್ಮಿಕೊಂಡಿದ್ದು ಅಂದು ಈ ಪ್ರಶಸ್ತಿಯನ್ನು ನೀಡಲಾಗುವುದು.

# ಬೇಸಿಕ್ ಮೌಂಟೆನರಿಂಗ್ ತರಬೇತಿ

ಬೆಂಗಳೂರು, ಜನವರಿ 16 (ಕರ್ನಾಟಕ ವಾರ್ತೆ)

ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ವತಿಯಿಂದ 2018-19 ನೇ ಸಾಲಿನಲ್ಲಿ ರಾಜ್ಯದ ಯುವಕ/ಯುವತಿಯರಿಗೆ 28 ದಿನಗಳ ಬೇಸಿಕ್ ಮೌಂಟೆನರಿಂಗ್ (ಪರ್ವತಾರೋಹಣ) ತರಬೇತಿಗೆ 16 ರಿಂದ 33 ವರ್ಷ ವಯೋಮಿತಿವುಳ್ಳರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜನವರಿ 25 ಕೊನೆಯ ದಿನಾಂಕವಾಗಿರುತ್ತದೆ. ಆಸಕ್ತರು ಕಚೇರಿಯ ವೆಬ್‌ಸೈಟ್ www.gethnaa.com ಇ-ಮೇಲ್ ವಿಳಾಸ gethnaa1989@gmail.com ಹಾಗೂ ದೂರವಾಣಿ ಸಂಖ್ಯೆ 080-2210454 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.